ಶ್ರೀ ಬಿ. ಎ. ಉಮ್ಮರಬ್ಬ.—ಸ್ಥಳಾಂತರಿಸಿದ ಜನರಿಗೆ ಏನೇನು ಪುನರ್‌ವಸತಿ ಸೌಕರ್ಯಗಳನ್ನು ಒದಗಿಸಿಕೊಡುತ್ತೀರಿ ?

ಶ್ರೀ ಜೆ. ಹೆಚ್ ಪಟೀಲ್.—ನೀರು ಬಂದು ಜಮೀನು ಮುಳುಗಡೆಯಾದವರಿಗೆ ಯಾವರೀತಿ ಪರಿಹಾರ ಕೊಡುತ್ತೇವೆ, ಆ ರೀತಿ ಇಲ್ಲಿ ಮಾಡಲು ಆಗುವುದಿಲ್ಲ. ಅಲ್ಲಿ ಎಕರೆಗೆ ಇಷ್ಟು ಎಂದು ಕೊಡುತ್ತೇವೆ. That is the Compensation he gets.

SRI B. A. UMARABBA.—But in the case of New Mangalore port Trust, they have given compensation adequately and also they rehabilitated in Kattipala. They have given all facilities to them. Nearly 300 families have been rehabtlitated and they have been given sites. They have given other credit facilities also. ಇದರ ಪಕ್ಕದಲ್ಲಿ ಕುಬಾಯಿ ಈ ಇದೆ ರೀತಿ ಜಮೀನು ಕಳೆದುಕೊಂಡವರಿಗೆ ಬೇರೆ ಜಾಗ ಹಾಗೆ ಕೊಡಮಿದ್ದರೆ theywill be on the street.

ಶ್ರೀ ಜೆ. ಹೆಚ್. ಪಟೀಲ್.—ಈ ಸಲಹೆಯನ್ನು ಪರಿಶೀಲನೆ ಮಾಡುತ್ತೇನೆ. For House sites and other things, the Government will certainly consider.

ನೇತ್ರಾವತಿ ನದಿಗೆ ತುಂಬೆಯ ಬಳಿ ವೆಂಟೆಡ್ ಡ್ಯಾಮ್ ನಿರ್ಮಿಸುವ ಬಗ್ಗೆ

೩೦೮೮. ಶ್ರೀ ಬಿ. ಎ. ಉಮ್ಮರಬ್ಬ (ವಿಟ್ಲ).—ವಾಸ್ತ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ತುಂಬೆಯ ಬಳಿ ನೇತ್ರಾವತಿ ನದಿಗೆ ಅಡ್ಡಲಾಗಿ ನಿರ್ಮಿಸಬೇಕಾಗಿರುವ ವೆಂಟೆಡ್ ಡ್ಯಾಂ ಯಾವ ಹಂತದಲ್ಲಿದೆ,

ಆ) ಇದರ ನಿರ್ಮಾಣ ಕಾರ್ಯ ವಿಳಂಬವಾಗಲು ಕಾರಣಗಳೇನು,

ಇ) ಇದರ ಕಾರ್ಯಾರಂಭ ಯಾವಾಗ ಮಾಡಲಾಗುವುದು.

ಶ್ರೀ ಆರ್.ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ೧೫೦.೦೦ ಲಕ್ಷ ರೂ.ಗಳ ಅಂದಾಜು ವೆಚ್ಚದ ಯೋಜನೆಗೆ ಸದ್ಯಕ್ಕೆ ಕೊಡುಗೆ ಕಾರ್ಯವಾಗಿ ಆಡಳಿತಾತ್ಮಕ ಅನುಮೋದನೆ ನೀಡುವ ಪ್ರಸ್ತಾವನೆ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಆ) ಎಲ್ಲಾ ಫಲಾನುಭವಿಗಳು ಅವರ ಭಾಗದ ವೆಚ್ಚದ ಹಣವನ್ನು ಇನ್ನೂ ನೀಡದೆ ಇರುವ ಕಾರಣ ವಿಳಂಬವಾಗಿದೆ.

ಇ) ಫಲಾನುಭವಿಗಳು ಅವರ ಪಾಲಿನ ವೆಚ್ಚದ ಹಣವನ್ನು ಪಾವತಿಸಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಿದ ನಂತರ ಕಾರ್ಯಾರಂಭ ಮಾಡಲಾಗುವುದು.

ಶ್ರೀ ಬಿ. ಎ ಉಮ್ಮರಬ್ಬ —ಇಲ್ಲಿ ಯಾರು ಯಾರು ನೀರು ಪಡೆಯುತ್ತಿದ್ದಾರೆ ಅವರು ತಮ್ಮ ಪಾಲಿನ ಮೊತ್ತವನ್ನು ಕಟ್ಟಿಲ್ಲವೆಂಬ ಅಭಿಪ್ರಾಯವನ್ನು ಮಾನ್ಯ ಸಚಿವರು ವ್ಯಕ್ತಪಡಿಸಿದ್ದಾರೆ. ಕಳೆದ ಬಾರಿ ಶ್ರೀ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದಾಗ, ನಮ್ಮ ಭಾಗದ ಎಲ್ಲಾ ಸದಸ್ಯರುಗಳ ಒಂದು ನಿಯೋಗವು ಅವರನ್ನು ಭೇಟಿ ಮಾಡಿತು. ನವಮಂಗಳೂರು ಬಂದರು, ಮಂಗಳೂರು ಫರ್ಟಿಲೈಜರ್ಸ್ ಅಂಡ್ ಕೆಮಿಕಲ್ಸ್, ಮ್ಯಾಗಡಾನ್ ಲಿಮಿಟೆಡ್, ಕುದುರೆಮುಖ ಹಾಗೂ ಉಳಿದವರು ಯಾರು ಯಾರು ಇದ್ದಾರೆ ಅವರನ್ನೆಲ್ಲಾ ಕರೆಸಿ ಮಾತುಕತೆ ಮಾಡಿ ಒಂದು ವರ್ಷವಾಯಿತು. ಅವರುಗಳು ಕೊಡಬೇಕಾದ ಮೊತ್ತವನ್ನು ಅವರಿಂದ ಕಲೆಕ್ಟ್ ಮಾಡಬೇಕೆಂದು ನಿರ್ಣಯವಾಯಿತು. I am very much surprised to hear that even after one year these consumers have not given their contribu ion. They may not voluntarily come and pay by themselves. It is your duty to

pressuries the concerned people and see that they are paid their contribution. They are your consumers and they have to pay for the water that you have given.

Therefore, my request to the Hon'ble Minister is to take immediate to collcet the contributions from these people. ಅವರಿಗೆ ದಿನ ನೀರು ಬೇಕು, ಆದರೆ ಅವರ ಪಾಲಿನ ಹಣವನ್ನು ಮಾತ್ರ ಕೊಡುತ್ತಿಲ್ಲ. ಅವರು ಕಟ್ಟಿಲ್ಲವೆಂದು ಕುಳಿತುಕೊಂಡರೆ ಹೇಗೆ ? ಅವರೇ ಬಂದು ಕಟ್ಟಿತ್ತಾರಾ ? ಅವರಿಗೆ ನೀರು ಸಿಗುತ್ತಿದೆ ಎಂದು ಅವರು ಸಮ್ಮತಿಸಿದ್ದಾರೆ. Nearly 6,000 acres of land are also under cultivation out of this water. ಬೇಸಿಗೆ ಬಂದ ಕೂಡಲೇ ನೀರು ಇರುವುದಿಲ್ಲ. ಅವರಲ್ಲಿ ವಿದ್ಯುತ್ ಪಂಪುಸೆಟ್ಟನ್ನೆಲ್ಲಾ ಕಟ್ ಮಾಡುತ್ತೀರಿ. ಅಡಿಕೆ ತೋಟ, ತೆಂಗಿನ ತೋಟ ಸಂಪೂರ್ಣವಾಗಿ ಒಣಗಿ ಹೋಗುತ್ತದೆ. ಭತ್ತ ಬೇಕಾದರೆ ಮತ್ತೆ ಬೆಳೆದುಕೊಳ್ಳಬಹುದು. My request to the Hon'ble Minister is to take immediate steps to collect the amount from these consumers and work is taken up as early as possible. I once again request you to take immediate action. It is a very serious question as far as the people in that area is concerned. I hope the Hon'ble Minisier will take immediate action in this regard.

ಶ್ರೀ ಆರ್. ವಿ. ದೇಶಪಾಂಡೆ.—ಅವರು ಹೇಳಿದ ಹಾಗೆ ಇವತ್ತು ಮಂಗಳೂರು ಸಿಟಿ ಕಾರ್ಪೊರೇಷನ್, ಎಂಸಿಎಫ್ ಮಂಗಳೂರು ನವಬಂದರು, ಸೂರತ್‌ಕಲ್ ಟಿಎಂಸಿ ಕಾಟಪಾಳ ಕದುರೆಮಜಲು ಇವರೆಲ್ಲರೂ ಬೆನಿಫಿಶರೀಸ್. ಇವರೆಲ್ಲರೂ ಕೂಡಿ ೧೫೦ ಲಕ್ಷ ರೂಪಾಯಿಗಳನ್ನು ಜಮಾ ಮಾಡಬೇಕಾಗಿದೆ. ಕಾಟಿಪಾಳ ಕರ್ನಾಟಕ ಏರಿಯಾ ಡೆವಲಪ್‌ಮೆಂಟ್ ಬೋರ್ಡ್, ಮಂಗಳೂರು ಆಯಿಲ್ ರಿಫೈನರೀಸ್, ಕೆಮಿಕಲ್ಸ್ ಐಐಡಿಸಿ ಅವರಿಂದ ಇನ್ನು ಕನ್ಸೆಂಟ್ ಬಂದಿಲ್ಲ. ಬೇರೆ ಎಲ್ಲರೂ ಅಂದರೆ ೧೦ರಲ್ಲಿ ೬ ಜನ ಕನ್ಸೆಂಟ್ ಕೊಟ್ಟಿದ್ದಾರೆ. ಆದಷ್ಟು ಬೇಗ ಇದಕ್ಕೆ ಆನುಮೋದನೆಯನ್ನು ಕೊಡುತ್ತೇನೆ. ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಬೋರ್ಡ್‌ನಲ್ಲಿ ದಿನಾಂಕ ೮-೮-೧೯೮೮ರಲ್ಲಿ ನಿರ್ಣಯ ತೆಗೆದುಕೊಂಡಿದ್ದೇನೆ. ಈ ಕೆಲಸಕ್ಕೆ ಮಂಗಳೂರು ಸಿಟಿ ಕಾರ್ಪೊರೇಷನ್‌ನವರು ಕಂಟ್ರಿಬ್ಯೂಷನ್ ಮಾಡುವುದಕ್ಕೆ ಮುಂದೆ ಬಂದಿದ್ದಾರೆ. ಆದಷ್ಟು ಬೇಗ ಇದನ್ನು ಮಾಡಿಸುತ್ತೇನೆ.

ಶ್ರೀ ಬಿ. ಎ. ಉಮರಬ್ಬ.—ಫಲಾನುಭವಿಗಳು ಅವರ ಪಾಲಿನ ವೆಚ್ಚದ ಹಣವನ್ನು ಲಂವಣಿಸಿ ಅಡಳಿತಾತ್ಮಕ ಅನುಮೋದನೆಯನ್ನು ನೀಡಿದ ನಂತರ ಕಾರ್ಯಾರಂಭ ಮಾಡಲಾಗುವುದು ಎಂದು ತಮ್ಮ ಉತ್ತರದಲ್ಲಿ ತಿಳಿಸಿದ್ದೀರಿ. ತಕ್ಷಣ ಇದಕ್ಕೆ ಆಡಳಿತಾತ್ಮಕ ಅನುಮೋದನೆ ಕೊಡುವುದಕ್ಕೆ ಏನು ಕಷ್ಟವಾಗಿದೆ. ಬಾಕಿಯುಳಿಕೆ ಡಿಲೆಯಾದರೂ ಚಿಂತೆ ಇಲ್ಲ ಇದನ್ನು ಆದಷ್ಟು ಬೇಗ ಮಾಡಬೇಕು.

ಶ್ರೀ ಆರ್. ವಿ. ದೇಶಪಾಂಡೆ —ಹಣವಿಲ್ಲದೆ ಆಡಳಿತಾತ್ಮಕ ಅನುಮೋದನೆಯನ್ನು ಕೊಡುವುದಕ್ಕೆ ಬರುವುದಿಲ್ಲ. ಕಾರ್ಪೊರೇಷನ್ ಮುಂತಾದ ಸಂಸ್ಥೆಗಳಿಂದ ೧೫೦ ಲಕ್ಷ ರೂಪಾಯಿ ಇನ್ನೂ ಜಮಾ ಆಗಿಲ್ಲ ಆದಷ್ಟು ಬೇಗ ಆ ಹಣವನ್ನು ಜಮಾ ಮಾಡಿಕೊಳ್ಳುತ್ತೇವೆ. ಆಡಳಿತಾತ್ಮಕ ಅನುಮೋದನೆಯನ್ನೂ ಕೂಡ ಕೊಡುತ್ತದೆ.

ಶ್ರೀ ಬಿ. ಎ. ಉಮರಬ್ಬ. ನೀವು ಆಡಳಿತಾತ್ಮಕ ಅನುಮೋದನೆಯನ್ನು ಕೊಟ್ಟರೆ, ಅವರಿಗೆ ನೀವು ದುಡ್ಡು ಕೊಟ್ಟಿಲ್ಲ ಅದಕ್ಕೆ ಈ ಕೆಲಸವನ್ನು ಪ್ರಾರಂಭ ಮಾಡುವುದಕ್ಕೆ ಅವಕಾಶವಾಗುತ್ತಿಲ್ಲ. ಆದಷ್ಟು ಬೇಗ ದುಡ್ಡು ಕೊಡಿ ಕೆಲಸ ಪ್ರಾರಂಭ ಮಾಡುತ್ತೇವೆಂದು ಹೇಳುವುದಕ್ಕೆ ನಿಮಗೆ ಅವಕಾಶ ಸಿಗುತ್ತದೆ. ವಸೂಲಿ ಮಾಡುವುದರಲ್ಲಿ ಬಹಳ ಜೋರಾಗಿ ಮಾಡಬಲ್ಲಿರಿ ಆ ಸಕ್ತಿ ತಮಗೆ ಇದೆ ಎಂದು ನನ್ನ ಭಾವನೆ.

ಶ್ರೀ ಆರ್. ವಿ.ದೇಶಪಾಂಡೆ.—ಆದಷ್ಟು ಬೇಗ ಮಾಡಿಸುತ್ತೇನೆ.

SRI BLASIUS M. D'SOUZA.—It is the responsibility of the Karnataka Urban Water Supply and Drainage Board to supply water. If the vented dam is not built up, it is not possible to supply water.

Most of the Major beneficieries have come forward to deposit the money. I think Government should come forward with certain amount and start the work immediately because monsoon season is over. If the work begins it will be completed at least by June.

ಶ್ರೀ ಆರ್. ವಿ. ದೇಶಪಾಂಡೆ.— ನಾನು ಈಗಾಗಲೇ ಹೇಳಿದ್ದೇನೆ. ಬೇಸಿಗೆಯ ಮೂರು ತಿಂಗಳಲ್ಲಿ ಆ ರಿವರ್ ಡೈಕ್ ಆಗುತ್ತದೆ ಟೆಲ್ಲಿ ಸ್ಕೂಪೇಜ್ ಕೆಪ್ಯಾಸಿಟಿ ಆಗಬೇಕು ಅವರಿಗೆ ನೀರು ದೊರಕಿಸಿ ಕೊಡಬೇಕೆಂಬ ಉದ್ದೇಶದಿಂದ ೧.೫೦ ಲಕ್ಷ ರೂಪಾಯಿಗಳ ಸ್ಕೀಮ್ ಒಂದನ್ನು ತಯಾರು ಮಾಡಿದ್ದೇವೆ. ಅಷ್ಟು ಹಣ ಬೋರ್ಡಿನಲ್ಲಿ ಇಲ್ಲದೇ ಇರುವುದರಿಂದ, ಹತ್ತು ಬೇರೆ ಬೇರೆ ಕಾರ್ಪೊರೇಷನ್ಸ್ ಗಳು, ಸಂಸ್ಥೆಗಳು ಇದಕ್ಕೆ ಹಣ ಕೊಡುವುದಕ್ಕೆ ಮುಂದೆ ಬಂದಿದ್ದಾರೆ. ಆದರೆ ಅವರಿಂದ ಇನ್ನೂ ಹಣ ಬಂದಿಲ್ಲ. ಇದನ್ನು ಪರ್ಸ್ಯೂ ಮಾಡಿ ಅದಷ್ಟು ಬೇಗ ಹಣವನ್ನು ಜಮಾ ಮಾಡುತ್ತೇವೆ. ಈ ಸ್ಕೀಮನ್ನು ಅಡ್ಮಿನಿಸ್ಟ್ರೇಟೀವ್ ಅಪ್ರೂವಲ್‌ಗೆ ಕಳಿಸಲಿಕ್ಕೆ ಅದಷ್ಟು ಬೇಗ ಕ್ರಮ ತೆಗೆದುಕೊಂಡು ಮಾಡಿಸುತ್ತೇನೆ.

ಅಧ್ಯಕ್ಷರು.— ಈಗ ಎಲ್ಲಾ ಪ್ರಶ್ನೆಗಳೂ ಮುಗಿದವು ಪ್ರಶ್ನೋತ್ತರ ವೇಳೆ ಮುಗಿಯಿತು.

ದಿನಾಂಕ ೧೧ ಮತ್ತು ೧೨ ಅಕ್ಟೋಬರ್ ೧೯೮೮ರಂದು(ಚುಕ್ಕೆ ಹಾಗೂ ಚುಕ್ಕೆಯೇ ಪಟ್ಟಿ) ಪ್ರಶ್ನೋತ್ತರಗಳು

ಅಧ್ಯಕ್ಷರು.—ದಿನಾಂಕ ೧೧ ಮತ್ತು ೧೨ ಅಕ್ಟೋಬರ್ ರಂದು ಅಧಿವೇಶನವು ಇಲ್ಲದಿರುವ ಕಾರಣ ಆ ದಿನಗಳ ಚುಕ್ಕೆ ಗುರುತಿನ ಹಾಗೂ ಚುಕ್ಕೆ ಗುರುತಿಲ್ಲದ ಚುಕ್ಕೆಯೇ ಹಾಗೂ ಚುಕ್ಕೆಯೇ ಪಟ್ಟಿಗಳ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಆಸ್ಪತ್ರೆಗಳಿಗೆ ಔಷಧಿ ಸರಬರಾಜು ಬಗ್ಗೆ

೫೦೨೦. ಶ್ರೀ ಕೆ. ಪಸಂತಬಂಗೇರ(ಬೆಳ್ತಂಗಡಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಆರೋಗ್ಯ ಕೇಂದ್ರ ಆರೋಗ್ಯ ಘಟಕ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿರುವ ೩೦ ಹಾಸಿಗೆಗಳ ಸರ್ಕಾರಿ ಆಸ್ಪತ್ರೆಗಳಿಗೆ ವರ್ಷ ಒಂದಕ್ಕೆ ಸರಬರಾಜು ಮಾಡಬೇಕಾಗಿರುವ ಔಷಧಿಗಳ ಪ್ರಮಾಣ ಹಾಗೂ ಮೊತ್ತ ವೆಷ್ಟು ?

ಆ) ಇಲಾಖೆಯಿಂದ ಆರೋಗ್ಯ ಕೇಂದ್ರಗಳಿಗೆ ಮತ್ತು ಆರೋಗ್ಯ ಘಟಕಗಳಿಗೆ ಕಳಪೆ ಔಷಧಿ ಹಾಗೂ ಸಾಮಗ್ರಿಗಳನ್ನು ಸರಬರಾಜು ಮಾಡುತ್ತಿರುವ ವಿಚಾರವು ಸರ್ಕಾರಕ್ಕೆ ಬಂದಿದೆಯೇ ?

ಇ) ಸಂಬಂಧಪಟ್ಟ ಆರೋಗ್ಯ ಕೇಂದ್ರ ಹಾಗೂ ಘಟಕಗಳು ಆಯಾ ಕೇಂದ್ರಗಳಿಗೆ ಬೇಕಾದ ಔಷಧಿಯನ್ನು ಸರಬರಾಜು ಮಾಡಬೇಕೆಂದು ಮನವಿ ಸಲ್ಲಿಸಿದ್ದರೂ ಆಯಾ ಕೇಂದ್ರದ ಮನವಿಯಂತೆ ಔಷಧಿಯನ್ನು ಸರಬರಾಜು ಮಾಡದೆ ಅವರಿಗೆ ಬೇಡವಾದ ಔಷಧಿಯನ್ನು ಸರಬರಾಜು ಮಾಡಲು ಕಾರಣವೇನು ?

ಈ) ಸರಿಯಾದ ರೀತಿಯಲ್ಲಿ ಔಷಧಿಯನ್ನು ಸರಬರಾಜು ಮಾಡಲು ಏನು ಕ್ರಮ ತೆಗೆದುಕೊಳ್ಳಲಾಗುವುದು ?